

ಚಿಂಟು: ಅಮ್ಮಾ! ಅಪ್ಪ ಹೇಳುವ ಕತೆಗಳೆಲ್ಲವೂ 'ಒಂದಾನೊಂದು ಕಾಲದಲ್ಲಿ' ಅಂತಲೇ ಪ್ರಾರಂಭವಾಗುತ್ತದೆ ಯಾಕಮ್ಮಾ?

ತಾಯಿ: ಅದು ನಿನಗೆ ಹೇಳುವ ಕತೆಗಳಲ್ಲಿ... ನನಗೆ ಹೇಳುವ ಕಥೆಗಳಲ್ಲಿ ಪ್ರಾರಂಭವಾಗುವುದು ಹೇಗೆ ಗೊತ್ತಾ?

ಚಿಂಟು: ಹೇಗೆ?

ತಾಯಿ: ಇವತ್ತು ಆಫೀಸ್‌ನಲ್ಲಿ ಕೆಲಸ ಜಾಸ್ತಿ ಇತ್ತು, ಅದಕ್ಕೇ ಮನೆಗೆ ಬರುವುದು ಲೇಟಾಯ್ತು!

★★★

ನ್ಯಾಯಾಧೀಶ: ನಿನಗೆ ವಕೀಲರಿದ್ದಾರಾ?

ಆರೋಪಿ: ಇಲ್ಲಾ ಯುವರಾನರ್!

ನ್ಯಾಯಾಧೀಶ: ನಿಮ್ಮ ಪರ ವಾದ ಮಾಡಲು ವಕೀಲರೊಬ್ಬರ ಅಗತ್ಯವಿದೆ ಅನಿಸುತ್ತಿಲ್ವಾ ನಿಮಗೆ?

ಆರೋಪಿ: ಇಲ್ಲ ಯುವರಾನರ್! ಯಾಕೆಂದರೆ ನಾನು ಎಲ್ಲಾ ಸತ್ಯವನ್ನೇ ಹೇಳಬೇಕು ಎಂದುಕೊಂಡಿದ್ದೇನೆ!

★★★

ಗುಗ್ಗೂ: ಏನಯ್ಯ ನನ್ನ, 'ನಾನು ಎದ್ದು ಬಿದ್ದದ್ದು!' ಕಾದಂಬರಿನ ಓದಿದೆಯಾ... ಹೇಗಿದೆ?

ಪುಂಡಲೀಕ: ಓದಿದೆ ಸ್ವಾಮಿ! ಬ್ರಹ್ಮಾಂಡವಾಗಿದೆ!

ಗುಗ್ಗೂ: ಅದರಲ್ಲಿ ನಿಮಗೆ ಮೆಚ್ಚುಗೆ ಯಾಗಿದ್ದು ಏನು?

ಪುಂಡಲೀಕ: ಕೊನೇ ಸಾಲು ತುಂಬ ಮೆಚ್ಚುಗೆಯಾಯ್ತು.

ಗುಗ್ಗೂ: ಏನದು?

ಪುಂಡಲೀಕ: ಸಮಾಪ್ತಿ!

★★★

ಕೋಟಲಿಂಗ: ಏನೋ! ನಾನು ಬರೆದ ಪುಸ್ತಕವನ್ನು ಓದಿಯೂ ನೀನು ಕನ್ನಡ ಸಬ್ಜೆಕ್ಟ್‌ನಲ್ಲಿ ಫೇಲಾದೆಯಾ?

ಏಕಲಿಂಗ: ನಾನು ಪರೀಕ್ಷೆನೇ ಬರೆಯಲಿಲ್ಲ ಸಾರ್!

ಕೋಟಲಿಂಗ: ಯಾಕೋ?

ಏಕಲಿಂಗ: ನಿಮ್ಮ ಪುಸ್ತಕ ಓದಿ ನನಗೆ ಜ್ವರ ಬಂದ್ಬಿಡ್ತು ಸಾರ್!

**(ಸಂಗ್ರಹ) ಜಿ.ವಿ. ಪ್ರಭು, ಬೆಂಗಳೂರು**

---



ಗುಂಡ: ಹ್ಯಾಪಿ ಬರ್ತ್‌ಡೇ ಅಜ್ಜಿ, ತಗೋ ಗಿಫ್ಟ್

ಅಜ್ಜಿ: ಮುಂಡೇದೆ, ನಾನು ಫುಟ್‌ಬಾಲ್ ಆಡ್ತೀನೇನೊ?

ಗುಂಡ: ನನ್ನ ಬರ್ತ್‌ಡೇಗೆ ನೀನು ಏನು ಕೊಟ್ಟಿದ್ದೆ?

ಅಜ್ಜಿ: ಭಗವದ್ಗೀತೆ.

**(ಸಂಗ್ರಹ) ಹಾಡ್ಯ ಬ. ಜಯಾನಂದ, ಮೈಸೂರು**

ಮರಣಶಯ್ಯೆಯಲ್ಲಿದ್ದ ಹೆಂಡತಿ ಗಂಡನಿಗೆ ಹೇಳಿದಳು

ನಾನು ಹೋದ ಮೇಲೆ, ಹೋದೆ ಅಂತ ಚಿಂತೆ ಮಾಡಬೇಡಿ, ನಮ್ಮ ಸರೋಜಾಳನ್ನು ಮದುವೆಯಾಗಿ ಬಿಡಿ.

ಗಂಡ ಹೇಳಿದ: ಆಗೋದಿಲ್ಲಾ, ನಾನು ಈಗಾಗಲೆ ಸುಧಾಗೆ ಮಾತುಕೊಟ್ಟಿದ್ದೇನೆ.

★★★

ಒಂದು ಕಾನ್ವೆಂಟ್‌ನಲ್ಲಿ

'ನಿನ್ನೆ ಕ್ಲಾಸಿಗೆ ಯಾಕೆ ಬರಲಿಲ್ಲಾ' ಕೇಳಿದರು ಮಿಸ್

'ಹಲ್ಲು ನೋಯ್ತಾ ಇತ್ತು ಮಿಸ್' ಎಂದ ಹುಡುಗ

'ಈಗಲೂ ಹಲ್ಲು ನೋಯ್ತಾ ಇದೆಯಾ ಮಗು?'

'ಗೊತ್ತಿಲ್ಲಾ ಮಿಸ್. ಆ ಹಲ್ಲು ಈಗ ಡೆಂಟಿಸ್ಟ್ ಹತ್ತಿರ ಇದೆ!

**(ಸಂಗ್ರಹ) ಮಹಾಂತೇಶ ಎಸ್. ಪಾಟೀಲ, ಹುನಗುಂದ**